2. The Maruthi Social Association, Kurupet, Kanakapura Taluk (S.No. 167/1968-69)

Sriyuths: Puttamade Gowda, Tavasaiah, Ramaiah, Hanumanthaiah, Kaleeraiah, Chikkeeraiah, Bombaiah, Mareeraiah and Chikavenkataiah.

3. Janaka Social Association, Kodihalli, Kanakapura Taluk (S.No. 130/1967-68)

Sriyuths: Lakshmi Gowda. Venkataswamy, Prasanna, Channachari, Shivarudraiah, Venkatagirish, Boodaiah, Muddaiah and Mahadeva.

4. Merchants Recreation Association, D. 48, Bus Stand Road, Kanakapura Town (S.No. 294/1970-71)

Sriyuths: K. B. Bolarajan, Venkata Setty, B. K. Raganath Rao, S. Nagaraju, Govindaraju, Narayana Setty and Rama Rao.

ಶ್ರೀ ಎಸ್. ಕರಿಯಪ್ಪ.—ಈ ಸೊಸೈಟಿಗಳಿಗೆ ಇನ್ ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆ ಯಾರಾದರೂ ಲೈಸನ್ಸ್ ಕೊಡುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲ.

ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಇಂಥ ೪ ಸೊಸೈಟಿಗಳಿವೆ ಎಂದು ಹೇಳಿದೆ. ಬೌನಿನಲ್ಲಿ ಸುಮಾರು ೧೦ ಇವೆ ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆ ಯಾರಾದರೂ ಲೈಸೆನ್ಸ್ ಕೊಡುವುದುಂಟೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಲ್ಲದೆ ಬೇರೆಯವರು ಸೊಸೈಟಿ ಆಕ್ಟ್ ಪ್ರಕಾರ ರಿಜಿಸ್ಟರು ಮಾಡಲು ಅವಕಾಶವಿಲ್ಲ. ಮಾನ್ಯ ಸದಸ್ಯರು ಹೇಳಿರುವ ಸಂಘಗಳು ಬೇರೆಯಾದರೆ ಅವು ಯಾವ ಕಾನೂನಿನ ಪ್ರಕಾರ ರಿಜಿಸ್ಟರಾಗಿವೆ ಎಂದು ವಿಚಾರಿಸಿ ಹೇಳಬೇಕು.

ಶ್ರೀ ಎಸ್. ಕರಿಯಪ್ಪ.—ಈಗ ಒಂದೆರಡು ಸೊಸೈಟಿಗಳಿಗೆ ಲೈಸೆನ್ಸ್ ಕೊಟ್ಟಮೇಲೆ ಅವು ಕೆಲಸ ಮಾಡುತ್ತಿವೆಯೇ ಎಂದು ನೋಡಲು ವ್ಯವಸ್ಥೆ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಇರತಕ್ಕ ಪದ್ಧತಿ ಪ್ರಕಾರ ಧ್ಯೇಯೋದ್ದೇಶಗಳಿಗೆ ತಕ್ಕಂತೆ ಸಂಘ ನಡೆಯದಿದ್ದರೆ ಆ ವಿಚಾರವಾಗಿ ದೂರು ಬಂದರೆ ಪೋಲೀಸರಿಗೆ ತಿಳಿಸಿ ಅವರ ಮೂಲಕ ವಿಚಾರ ತಿಳಿದುಕೊಳ್ಳುವುದು ವಾಡಿಕೆಯಾಗಿದೆ.

SUPPLY OF ELECTRICITY TO OTHER STATES

492. Sri U. T. Fareed (Mangalore) .—

Will the Minister for Public Works and Electricity be pleased to state :—

the rate at which the electricity is sppplied to other State by M. S. E. B.?

SRI H. M. CHANNABASAPPA (Minister for Public Works and Electricity) .—

At the moment electricity is supplied to Goa and Andhra Pradesh, according to the existing agreements, at the following rates:-

(1) Goa 6.25 paise per unit.

(2) Andhra Pradesh 5.5 paise per unit for the first 10) million units and 5 palse per unit for the subsequent units.

ಶ್ರೀ ಯು. ಟಿ. ಫರೀದ್ .—ಸ್ವಾಮಿ, ತಮ್ಮ ಉತ್ತರದಲ್ಲಿ ಗೋವೆಗೆ ಪ್ರತಿ ಯುನಿಟ್ಟಿಗೆ ೬.೨೫ ಪೈಸೆಯಂತೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಗಾದರೆ ನಮ್ಮ ಮೈಸೂರು ದೇಶದಲ್ಲಿ ಒಂದು ಯೂನಿಟ್ಟಿಗೆ ಛಾರ್ಜು ಎಷ್ಟು ಸ್ವಾಮಿ?

‡ ಶ್ರೀ ಹೆಚ್ ಎಂ. ಚೆನ್ನಬಸಪ್ಪ :—ಮೈಸೂರು ದೇಶದಲ್ಲಿ ಯಾವ ಯಾವ ಬಾಬುಗಳ ಮೇಲೆ ವಿದ್ಯುಚ್ಛಕ್ತಿ ತೆಗೆದುಕೊಳ್ಳುತ್ತಾರೋ ಆ ಪ್ರಕಾರ ಛಾರ್ಜು ಹಾಕುತ್ತಾರೆ.

ಶ್ರೀ ಯು. ಟಿ. ಫರೀದ್ .—ಸ್ವಾಮಿ, ಪಂಪುಸೆಟ್ಟುಗಳ ಮೇಲೆ ಹಾಕುವ ವಿದ್ಯುಚ್ಛಕ್ತಿ ರೇಟು ಎಷ್ಟು, ಕನ್‌ಸ್ಯೂಮರ್ಸ್ ಮೇಲೆ ಹಾಕುವ ರೇಟ್ ಎಷ್ಟು ಹೇಳುತ್ತಿರಾ ಸ್ವಾಮಿ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ .—ಈ ಪ್ರಶ್ನೆ ಕೇಳಿರುವುದು ರೇಟ್‌ಗೆ ಸಂಬಂಧಪಟ್ಟಿದ್ದಲ್ಲ. ಆದುದರಿಂದ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ .—ಸ್ವಾಮಿ, ಮೊನ್ನೆ ದಿವಸ ನಡೆದ ಸೌತ್ ಜೋನ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಎಲೆಕ್ಟ್ರಿಸಿಟಿ ರೇಟ್ ಬಗ್ಗೆ ಚರ್ಚೆ ನಡೆದಾಗ ಗೋವಾ ಮತ್ತು ಆಂಧ್ರಪ್ರದೇಶಕ್ಕೆ ಏನು ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದ್ದೀರೋ ಅದರ ರೇಟನ್ನು ಕಡಿಮೆ ಮಾಡಬೇಕು ಎಂದು ಕೇಳಿಕೊಂಡಿದ್ದಾರೆ. ಆದಕ್ಕೆ ತಾವು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ? ಏನು ಯೋಚನೆ ಮಾಡಿದ್ದೀರಾ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಹೆಚ್. ಎಂ ಚೆನ್ನಬಸಪ್ಪ .—ತಮಗೆ ತಪ್ಪು ವರದಿಯಾಗಿದೆ ಎಂದು ಕಾಣುತ್ತದೆ. ಒಂದು ರಾಜ್ಯದಲ್ಲಿ ಸರ್‌ಪ್ಲಸ್ ಆಗಿರತಕ್ಕಂಥ ವಿದ್ಯುಚ್ಛಕ್ತಿಯನ್ನು ಇನ್ನೊಂದು ರಾಜ್ಯಕ್ಕೆ ಅಂದರೆ ಡಿಫಿಸಿಟ್ ಆಗಿರತಕ್ಕಂಥ ರಾಜ್ಯಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ನಿಗದಿಯಾಗಿದೆ ಅಷ್ಟೆ ಹೊರತು ಮತ್ತೇನೂ ಇಲ್ಲ.

ಶ್ರೀ ಯು. ಟಿ. ಫರೀದ್ .—ಮೈಸೂರು ರಾಜ್ಯದಲ್ಲಿ ಹೊರಗಡೆ ರಾಜ್ಯಕ್ಕಿಂತಲೂ ಹೆಚ್ಚು ರೇಟು ಇದೆ ಎನ್ನುವುದನ್ನು ಒಪ್ಪುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ .—ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ರೇಟುಗಳಿವೆ ಎನ್ನುವುದನ್ನು ಹೋಲಿಕೆ ಮಾಡಿ ನೋಡಿದರೆ ಹೆಚ್ಚು ಕಡಿಮೆ ಗೊತ್ತಾಗುತ್ತದೆ. ಅದೇ ರೀತಿ ಬಲ್ಕ್‌ನಲ್ಲಿ ಸಪ್ಲೈ ಮಾಡುವ ಮಾಡುವ ರೇಟನ್ನೂ ಕೂಡ ಹೋಲಿಕೆ ಮಾಡಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಹೆಚ್. ಎಸ್. ಸಿದ್ಧಪ್ಪ .—ತಾವು ಈಗ ಏನು ಹೊರ ರಾಜ್ಯಗಳಿಗೆ ಬಲ್ಕ್‌ನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದ್ದೀರೋ ಅದು ಮೈಸೂರು ರಾಜ್ಯಕ್ಕಿಂತಲೂ ಕಡಿಮೆ ರೇಟ್‌ನಲ್ಲಿ ಇದೆ ಎನ್ನುವುದಂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ .—ನಾವು ಬಲ್ಕ್‌ನಲ್ಲಿ ವಿದ್ಯುಚ್ಛಕ್ತಿಯನು ಬೇರೆ ರಾಜ್ಯಗಳಿಗೆ ಸಪ್ಲೈ ಮಾಡುವಾಗ ನಷ್ಟವಾಗುವ ರೀತಿಯಲ್ಲಿ ಮಾಡುವುದಿಲ್ಲ. ಏನಾದರೂ ಲಾಭ ಮಾಡಬೇಕು ಎನ್ನುವ ಉದ್ದೇಶದಿಂದ ಕೊಡುತ್ತೇವೆ.